

# ತೆರೆದ ಬಯಲ ಸ್ವರ್ಗ

**ಹಿಮಾಚಲ ಪ್ರದೇಶದ ಖಜ್ಜಿಯಾರ್ ಭಾರೀ ಸಂಖ್ಯೆಯ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.**

■ ಚಿತ್ರ–ಲೇಖನ: **ಎಸ್. ಪ್ರಭಾವತಿ**

ಭಾರತದ ಮಿನಿ ಸ್ವಿಝರ್ಲಂಡ್ ಎಂದೇ ಹೆಸರಾದ ಖಜ್ಜಿಯಾರ್ ಹಿಮಾಚಲ ಪ್ರದೇಶದ ಡಾಲ್ ಹೌಸಿ ಹಾಗೂ ಚಂಬಾ ನಡುವೆ ಇದೆ.

ಭಾರಿ ಹಿಮ ಬೀಳುವುದರಿಂದ ಇಲ್ಲಿನ ಸೇತುವೆ, ತೊರೆಗಳು ನೋಡಲು ಆಕರ್ಷಕ. ಆದರೆ ವಿಪರೀತ ಚಳಿ. ಚಂಬಾ ವ್ಯಾಲಿಯಲ್ಲಿ ಒಂದೂವರೆ ಚದರ ಕಿ .ಮೀ ವಿಸ್ತೀರ್ಣದ ಮೇರು ಮೈದಾನದ ಮಧ್ಯ ಗಂಗಾಳ ಆಕಾರದಲ್ಲಿರುವ ಸಣ್ಣ ಕೊಳವಿದೆ. ನಿರುಪಯುಕ್ತ ಕಳೆಯಿಂದ ಸ್ಪಂಜಿನಂತಹ ಪಾಚಿ ಬೆಳದಿದೆ.

ಪಚ್ಚೆಯೋಪಾದಿಯ ತೆರದ ಮೈದಾನದ ಸುತ್ತ ನಡೆಯಬಯಸುವವರು ದೇವದಾರು ವೃಕ್ಷದ ನೆರಳಿನ ಪಾದಚಾರಿ ಮಾರ್ಗದಲ್ಲಿ ಬಿರು ಬಿಸಿಲಿನಲ್ಲೂ ಚಲಿಸಬಹುದು. ಈ ಮೈದಾನದ ಇಳಿಜಾರಿನಲ್ಲಿ ಯಾವುದೇ ದೈಹಿಕ ತೊಂದರೆಯಿಲ್ಲದೆ ಕೊಳದೆಡೆ ಉರುಳಾಡುವುದೆಂದರೆ ಮಕ್ಕಳಿಗಂತೂ ಸ್ವರ್ಗ ಸುಖ. ಒಂಬತ್ತು ಕುಳಿಗಳ ಗಾಲ್ಫ್ ಕೋರ್ಟ್ ಇಲ್ಲಿನ ಮತ್ತೊಂದು ಪ್ರಮುಖ ಅಕರ್ಷಣೆ. ಪ್ರವಾಸಕ್ಕೆ ಮಾರ್ಚ್ ನಿಂದ ಜೂನ್ ತಿಂಗಳು ಸೂಕ್ತ ಕಾಲ .

ಹನ್ನೆರಡನೇ ಶತಮಾನಕ್ಕೆ ಸೇರಿದ ಸುವರ್ಣ ಗುಮ್ಮಟದ ಪ್ರಾಚೀನ ಖಜ್ಜಿನಾಗ್ ದೇವಾಲಯದಿಂದಾಗಿ ಈ ಸ್ಥಳಕ್ಕೆ ಖಜ್ಜಿಯಾರ್ ಎಂಬ ಹೆಸರು ಬಂದಿದೆ. 1992 ಜುಲೈನಲ್ಲಿ ಭಾರತದ ಖಜ್ಜಿಯಾರ್ ಅನ್ನು ವಿಶ್ವ ಭೂಪಟದಲ್ಲಿ ತಂದು ನಿಲ್ಲಿಸಿದ ಕೀರ್ತಿ ಸ್ವಿಝರ್ಲಂಡ್‌ನ ವೈಸ್ ಕೌನ್ಸೆಲರ್ ವಿಲ್ಲಿ ಟಿ. ಬ್ಲಾಝು ಅವರಿಗೆ ಸಲ್ಲುತ್ತದೆ. ಖಜ್ಜಿಯಾರ್ ಅನ್ನು ಭಾರತದ ಮಿನಿ ಸ್ವಿಝರ್ಲಂಡ್ ಎಂದು ಕರೆದು ಹೈಕಿಂಗ್ ಫುಟ್‌ಪಾತ್‌ಗೆ ಹಳದಿ ಬಣ್ಣದ ಫಲಕ ಒಂದನ್ನು ನೆಡುವುದರ ಮೂಲಕ ಸ್ವಿಝರ್ಲಂಡ್ ಸ್ಥಳದ ಹೋಲಿಕೆಯನ್ನು ಹೊಂದಿರುವ ವಿಶ್ವದ 160 ಸ್ಥಳದಲ್ಲಿ ಭಾರತದ ಖಜ್ಜಿಯಾರ್ ಸಹ ಒಂದು ಎಂದೆಲ್ಲ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಖಜ್ಜಿಯಾರ್‌ನ ಮತ್ತೊಂದು ಪ್ರಮುಖ ಆಕರ್ಷಣೆ  ಖಜ್ಜಿನಾಗ್ ದೇವಾಲಯ. ಖಜ್ಜಿಲೇಕ್‌ನ ಸಮೀಪದ ಸುವರ್ಣ ಗೊಮ್ಮಟದಿಂದ ಶೃಂಗರಿಸಲ್ಪಟ್ಟ ಪ್ರಾಚೀನ ಗೋಲ್ಡನ್ ದೇವಿ ಮಂದಿರ. ಈ ದೇವಾಲಯ ನಾಗದೇವತೆಗೆ ಸಮರ್ಪಣೆಯಂತಿದೆ. ಮೊಘಲ ಹಾಗೂ ಹಿಂದೂ ಶಿಲ್ಪಕಲೆಯನ್ನು ಹೋಲುವ ಸುಂದರವಾದ ಮರದ ಕೆತ್ತನೆ ದೇಗುಲದ ಮೇಲ್ಛಾವಣಿಯ ಶಿಲ್ಪ ಸೌಂದರ್ಯವನ್ನು ಹೆಚ್ಚಿಸಿದೆ. ಪಹರಿ ಶೈಲಿಯಲ್ಲಿ ನಿರ್ಮಿತವಾದ ಈ ದೇವಾಲಯದ ಕಟ್ಟಡಕ್ಕೆ ಸ್ಥಳೀಯವಾದ ಸ್ಲೇಟು ಪುಡಿ ಹಾಗೂ ಸುಣ್ಣದ ಕಲ್ಲನ್ನು ಬಳಸಲಾಗಿದೆ.

ಪ್ಯಾರಾ ಗ್ಲೈಡಿಂಗ್, ಕುದುರೆ ಸವಾರಿ ಖಜ್ಜಿಯಾರ್‌ನ ಪ್ರಮುಖ ಸಾಹಸ